# ಇಂದು ಆಕಾಶ ವೀಕ್ಷಣಾಲಯ ಲೋಕಾರ್ಪಣೆ

VIJAVA Vani 24/2/13

ಶಿವಮೊಗ್ಗ: ಇಲ್ಲಿನ ಜಾವಳ್ಳಿಯ ಜ್ಞಾನದೀಪ ವಿದ್ಯಾಸಂಸ್ಥೆಯಲ್ಲಿ ಖ್ಯಾತ ಖಗೋಳ ವಿಜ್ಞಾನಿ ಸಿ.ವಿ.ರಾಮನ್ ಉಪಯೋಗಿಸುತ್ತಿದ್ದ ಯಂತ್ರಗಳನ್ನು ಬಳಸಿಕೊಂಡು ಆಕಾಶ ವೀಕ್ಷಣಾಲಯವನ್ನು ಸ್ಥಾಪಿಸಲಾಗಿದ್ದು, ಇದನ್ನು ರಾಷ್ಟ್ರೀಯ ವಿಜ್ಞಾನ ದಿನವಾದ ಫೆ. 28 ರಂದು ಲೋಕಾರ್ಪಣೆ ಮಾಡಲಾಗುತ್ತಿದೆ. ವಿದ್ಯಾಸಂಸ್ಥೆಯ ಕಾರ್ಯದರ್ಶಿ ಪ್ರೊ। ವಿ.ಡಿ. ದೇವೇಂದ್ರ ಪತ್ರಿಕಾಗೋಷ್ಠಿಯಲ್ಲಿ ಈ ವಿಷಯ ತಿಳಿಸಿ ವಿಜ್ಞಾನಿ ಸಿ.ವಿ.ರಾಮನ್ ಅವರು ಉಪಯೋಗಿಸುತ್ತಿದ್ದ ಗೋಳವನ್ನು ಬಳಸಿಕೊಂಡು ಇದನ್ನು ಕಾಲೇಜಿನಲ್ಲಿ ಪುನರ್‌ನಿರ್ಮಿಸಲಾಗಿದೆ. ಬಹುತೇಕ ರಾಜ್ಯದಲ್ಲಿಯೇ ಇಷ್ಟು ದೊಡ್ಡ ಆಕಾಶ ವೀಕ್ಷಣಾಲಯವೊಂದು ಕಾಲೇಜಿನಲ್ಲಿ ಇರುವುದು ಮೊದಲನೆಯದಾಗಿದೆ ಎಂದ ಅವರು ಇದು ಜಿಲ್ಲೆಗೂ, ವಿದ್ಯಾಸಂಸ್ಥೆಗೂ ಹೆಮ್ಮೆ ಎಂದರು.

ಆಕಾಶಕಾಯಗಳ ಪರಿವೀಕ್ಷಣೆ ಮತ್ತು ಅಧ್ಯಯನದಲ್ಲಿ ಆಕಾಶ ವೀಕ್ಷಣಾಲಯ ಒಂದು ಅತಿ ಮುಖ್ಯ ಘಟಕ. ಈ ರೀತಿಯ ಘಟಕಗಳು ಬಹು ಅಪರೂಪ. ಈ ಭಾಗದ ಎಲ್ಲ ವಿದ್ಯಾರ್ಥಿಗಲು ಮತ್ತು ಸಾರ್ವಜನಿಕರಿಗೆ ಅನು ಕೂಲವಾಗಲೆಂದು ಮತ್ತು ಖಗೋಳ ವೀಕ್ಷಣೆಗೆ ಉತ್ತೇಜನ ನೀಡಲೆಂದು ಇದನ್ನು ನಿರ್ಮಿಸಲಾಗಿದೆ. ಸಾರ್ವಜನಿಕರು ಮತ್ತು ವಿದ್ಯಾರ್ಥಿಗಳು ಇದರ ಲಾಭ ಪಡೆಯಬಹುದು ಎಂದು ಹೇಳಿದರು. ಬೆಂಗಳೂರಿನ ರಾಮನ್ ರಿಸರ್ಚ್ ಇನ್‌ಸ್ಟಿಟ್ಯೂಟ್ ಅವರ ಸಹಕಾರದೊಂದಿಗೆ ನಿರ್ಮಿಸಲಾಗಿರುವ ಇದನ್ನು ಫೆ. 28 ರಂದು ರಾಮನ್ ಇನ್‌ಸ್ಟಿಟ್ಯೂಟ್‌ನ ಹಿರಿಯ ಪ್ರೊಫೆಸರ್ ಉದಯಶಂಕರ್ ಅವರು ಲೋಕಾರ್ಪಣೆಗೊಳಿಸಲಿದ್ದಾರೆ ಎಂದರು. ಗೋಷ್ಠಿಯಲ್ಲಿ ಸಂಸ್ಥೆಯ ಸಾರ್ವಜನಿಕ ಸಂಪರ್ಕಾಧಿಕಾರಿ ಮಧು, ಕಾಲೇಜಿನ ಪ್ರಾಂಶುಪಾಲ ಶ್ರೀಕಾಂತ್ ಹೆಗ್ಡೆ ಉಪಸ್ಥಿತರಿದ್ದರು.



ಶಿವಮೊಗ್ಗ: ಜಾವಳ್ಳಿಯ ಜ್ಞಾನದೀಪ ವಿದ್ಯಾಸಂಸ್ಥೆಯಲ್ಲಿ ನಿರ್ಮಿಸಲಾಗಿರುವ ಆಕಾಶ ವೀಕ್ಷಣಾಲಯ.